AUGUST 02, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

1. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ, 20ನೇ ಕಂತಿನ ಹಣವನ್ನು, ಪ್ರಧಾನಮಂತ್ರಿ ನರೇಂದ್ರ ಮೋದಿ, ತಾವು ಪ್ರತಿನಿಧಿಸುವ, ಉತ್ತರಪ್ರದೇಶದ ವಾರಾಣಸಿಯಲ್ಲಿ ಬಿಡುಗಡೆ ಮಾಡಿದರು.

<><><>

ಧಾರವಾಡ ಜಿಲ್ಲೆಯ, 99 ಸಾವಿರದ 983 ಅರ್ಹ ಫಲಾನುಭವಿ ರೈತರಿಗೆ, 20 ಕೋಟಿ 15 ಲಕ್ಷ ರೂಪಾಯಿ, ನೇರವಾಗಿ ಬ್ಯಾಂಕ್ ಖಾತೆಗೆ ಜಮೆಯಾಗಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಬಿಡುಗಡೆ ಕಾರ್ಯಕ್ರಮದಲ್ಲಿ, ಅವರು ಭಾಗವಹಿಸಿ, ರೈತರೊಂದಿಗೆ ಸಂವಾದ ನಡೆಸಿದರು.

<><><>

2. ಸ್ವಾತಂತ್ರ್ಯ ಹೋರಾಟಗಾರ ಹಾಗೂ ತ್ರಿವರ್ಣ ಧ್ವಜ ವಿನ್ಯಾಸಕ, ಪಿಂಗಲಿ ವೆಂಕಯ್ಯ ಅವರ ಜನ್ಮದಿನೋತ್ಸವದಂದು, ಅನೇಕ ಗಣ್ಯರು, ಅವರ ಸ್ಮೃತಿಗೆ ಗೌರವ ನಮನ ಸಲ್ಲಿಸಿದ್ದಾರೆ. ಅವರ ವಿಶಿ ್ಟ ಕಲೆ, ದೇಶಪ್ರೇಮ ಅಡಕವಾಗಿರುವ, ಹೆಮ್ಮೆಯ ತ್ರಿವರ್ಣ ಧ್ವಜವನ್ನು ರಾಷ್ಟ್ರ ಗೌರವದ ಪ್ರತೀಕವಾಗಿ, ಆರೋಹಣ ಮಾಡಲಾಗುತ್ತಿದೆ.

<><><>

ಭಾರತದ ವೈವಿಧ್ಯತೆ, ಏಕತೆ, ಶಾಂತಿ–ಸೌಹಾರ್ದತೆ, ಗೌರವ ಪರಿಕಲ್ಪನೆಯ ಅವರ ರಾಷ್ಟ್ರೀಯ ಕೊಡುಗೆಗೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

<><><>

3. ಕೇಂದ್ರ ಪುರಸ್ಕೃತ ಸಾಮಾಜಿಕ ಹಾಗೂ ಭದ್ರತಾ ಯೋಜನೆಗಳ ಕುರಿತು, ಜನ ಜಾಗ್ರತಿ ಅಭಿಯಾನ, ಕೊಪ್ಪಳ ಜಿಲ್ಲೆಯಲ್ಲಿ ಮುಂದುವರಿದಿದೆ.

ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಕೊಪ್ಪಳ ಜಿಲ್ಲೆ ಅಗ್ರಣಿ ಬ್ಯಾಂಕ್ ವ್ಯವಸ್ಥಾಪಕ, ಮಾರುತಿ.

<><><>

ಮಾರುತಿ ಧ್ವನಿ 30 ಸೆಕೆಂದುಗಳು

<><><>

4. ಸಾಂಪ್ರದಾಯಿಕ ಕೊಲ್ಹಾಪುರಿ ಪಾದರಕ್ಷೆಯ, 'ಜಿಯೋ ಟ್ಯಾಗ್' ಅಧಿಕೃತವಾಗಿ, ಎರಡು ಸರ್ಕಾರಿ ಸಂಸ್ಥೆಗಳಿಗೆ ಸೇರಿದೆ ಎಂದು, ಬಾಂಬೆ ಉಚ್ಚ ನ್ಯಾಯಾಲಯ ಆದೇಶಿಸಿದೆ. ನೋಂದಾಯಿತ 'ಜಿ.ಐ.' ಹೊಂದಿರುವವರು ಮಾತ್ರ, ಕಾನೂನುಬದ್ಧ ಹಕ್ಕು ಹೊಂದಿದ್ದಾರೆ ಎಂದು, ನ್ಯಾಯಾಲಯ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯಲ್ಲಿ ಆದೇಶಿಸಿದೆ. ಕರ್ನಾಟಕದ, ಡಾಕ್ಟರ್ ಬಾಬು ಜಗಜೀವನ್ ರಾಮ್ ಲೆದರ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇ ́ನ್ ಲಿಮಿಟೆಡ್ (LIDKAR) ಹಾಗೂ ಮಹಾರಾಷ್ಟ್ರದ ಸಂತ ರೋಹಿದಾಸ್ ಲೆದರ್ ಇಂಡಸ್ಟ್ರೀಸ್ ಮತ್ತು ಚರ್ಮಕಾರ್ ಡೆವಲಪ್‌ಮೆಂಟ್ ಕಾರ್ಪೊರೇ ́ನ್ ಲಿಮಿಟೆಡ್ (LIDCOM) ಜಿ.ಐ. ಬಳಸಲು, ಹಕ್ಕು ಹೊಂದಿದ್ದಾಗಿ, ತೀರ್ಪು ಪ್ರಕಟಗೊಂಡಿದೆ.

<><><>

5. ಹೆಮ್ಮೆಯ ಕನ್ನಡಿಗ, ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಿಂದ, ಗಣಿತ ಶಾಸ್ತ್ರದಲ್ಲಿ ರ್‍ಯಾಂಗ್ಲರ್ ಗೌರವಕ್ಕೆ ಪಾತ್ರರಾದ, ಶ್ರೇ ̥ ಗಣಿತ ಶಾಸ್ತ್ರಜ್ಞ, ಪದ್ಮಭೂ ́ಣ ಡಿ.ಸಿ. ಪಾವಟೆ ಅವರ ಜನ್ಮ ದಿನ ಇಂದು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವನ್ನು ಕಟ್ಟಿ, ಬೆಳೆಸುವಲ್ಲಿ ಅವರ ಶ್ರಮ ಮನನೀಯ.

<><><>

'14 ವ ́ಗಳ ಕಾಲ ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಯಾಗಿ, ಪಂಜಾಬ್ ರಾಜ್ಯಪಾಲರಾಗಿ ಹಾಗೂ ಬೆಂಗಳೂರು ವಿಧಾನಸೌಧದ ಸಮೀಪ, ಬಸವಭವನ ನಿರ್ಮಿಸುವಲ್ಲಿ ಅವರ ಪಾತ್ರ ಮಹತ್ವದ್ದು' ಎಂದು, ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ, ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

<><><>

6. ಹುಬ್ಬಳ್ಳಿಯ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, 97ನೇ ಸಂಸ್ಥಾಪಕರ ದಿನಾಚರಣೆ ಸಮಾರಂಭ, ಇಂದು ಸಂಜೆ 4.30ಕ್ಕೆ, ಹುಬ್ಬಳ್ಳಿಯ ಅಮರಗೋಳದ, ಎ.ಪಿ.ಎಂ.ಸಿ. ಆವರಣದ, ಹುಬ್ಬಳ್ಳಿ–ಧಾರವಾಡ ವಿವಿಧೋದ್ದೇಶ ವಸ್ತು ಪ್ರದರ್ಶನ ಕೇಂದ್ರದಲ್ಲಿ, ಆಯೋಜಿತವಾಗಿದೆ. ಅಧ್ಯಕ್ಷತೆಯನ್ನು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಎಸ್.ಪಿ.ಸಂಶಿಮಠ ವಹಿಸಲಿದ್ದು, ಮುಖ್ಯ ಅತಿಥಿಯಾಗಿ ಪಾರ್ಥ ಜಿಂದಾಲ್ ಭಾಗವಹಿಸುವರು.

<><><>

7. ಬೆಂಗಳೂರಿನ, ಕಬ್ಬನ್ ಉದ್ಯಾನದಲ್ಲಿ, ಸಸ್ಯ ಪ್ರಭೇದ, ಜೀವವೈವಿಧ್ಯ ಹಾಗೂ ಐತಿಹಾಸಿಕ ಸ್ಥಳಗಳನ್ನು, ಸಾರ್ವಜನಿಕರಿಗೆ ಪರಿಚಯಿಸಲು, 'ಕಬ್ಬನ್ ನಡಿಗೆ' ಇಂದಿನಿಂದ, ಪ್ರತಿ ಶನಿವಾರ ಮತ್ತು ಭಾನುವಾರ, ಇಂದು ಮತ್ತು ನಾಳೆ, ಜರುಗಲಿದೆ. ವಯಸ್ಕರಿಗೆ ತಲಾ 200 ರೂಪಾಯಿ ಹಾಗೂ ಮಕ್ಕಳಿಗೆ ತಲಾ 50 ರೂಪಾಯಿ ದರ ನಿಗದಿಪಡಿಸಲಾಗಿದೆ. ಮಾರ್ಗದರ್ಶಕರು ವಿವರ ನೀಡಲಿದ್ದಾರೆ. walk.cubbonpark.in ಜಾಲತಾಣದಲ್ಲಿ ಹೆಚ್ಚಿನ ಮಾಹಿತಿ ಇದೆ.

<><><>

8. ರಭಸದ ಗಾಳಿಯೊಂದಿಗೆ, ರಾಜ್ಯದ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ, ಚದುರಿದಂತೆ, ಸಾಧಾರಣ ಮಳೆ ಸಾಧ್ಯತೆಯಿದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬರುವ 5ನೇ ತಾರೀಖು, ಭಾರಿ ಮಳೆಯಾಗುವ ಸಂಭವವಿದ್ದು, ಒಳನಾಡು ಜಿಲ್ಲೆಗಳಲ್ಲಿ ಅಲ್ಲಲ್ಲಿ, ಚದುರಿದಂತೆ ಹಗುರದಿಂದ ಸಾಧಾರಣ ಮಳೆಯಾಗುವ ನಿರೀಕ್ಷೆ ಇದೆ.

<><><>

9. ಕೊಡಗು ಜಿಲ್ಲೆ, ಮಡಿಕೇರಿ ರೆಡ್ ಕ್ರಾಸ್ ಭವನದಲ್ಲಿ ತೆರೆಯಲಾದ, ಕಾಳಜಿ ಕೇಂದ್ರಕ್ಕೆ ಶಾಸಕ ಮಂತರಗೌಡ, ಭೇಟಿ ನೀಡಿ, ಪರಿಶೀಲಿಸಿದರು. 5 ಕುಟುಂಬಗಳು ಇಲ್ಲಿ ಆಶ್ರಯ ಪಡೆದಿದ್ದು, ಸಂತ್ರಸ್ತರಿಗೆ ಆಶ್ರಯ ಮನೆ ಹಾಗೂ ಸೂಕ್ತ ಪರಿಹಾರ ನೀಡುವ ಬಗ್ಗೆ, ಜಿಲ್ಲಾಧಿಕಾರಿಗೆ ಕ್ರಮಕೈಗೊಳ್ಳಲು ಸೂಚಿಸಿದರು.

<><><>

10. ಸಮುದ್ರದಲ್ಲಿ ಮೀನುಗಾರಿಕೆಗೆ ತೆರಳುವಾಗ, ಮೀನುಗಾರರು ಲೈಫ್ ಜಾಕೆಟ್ ಬಳಸುವಂತೆ, ಮನವೊಲಿಸಲು ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಜಾಗ್ರತಿ ಮೂಡಿಸುವಂತೆ, ಉಡುಪಿ ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿ, ರೋಹಿಣಿ ಸಿಂಧೂರಿ, ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ. ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅವರು, ವಿವಿಧ ಯೋಜನೆಗಳ ಪ್ರಗತಿ ಪರಿಶೀಲಿಸಿ, ಮಾತನಾಡಿದರು.

<><><>

11. ಆಗಸ್ಟ್ 15, 79ನೇ ಸ್ವಾತಂತ್ರ್ಯ ದಿನಾಚರಣೆ, ತಮ್ಮ ಭಾಷಣ ರೂಪಿಸಲು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಸಾರ್ವಜನಿಕರಿಂದ ಸಲಹೆ ಬಯಸಿದ್ದಾರೆ. ಸಾರ್ವಜನಿಕರು MyGov ಹಾಗೂ NaMo ಆಪ್‌ಗಳ ಮೂಲಕ ಅಭಿಪ್ರಾಯ ಹಂಚಿಕೊಳ್ಳಲು, ಅವರು ಕೋರಿದ್ದಾರೆ.

<><><>

12. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ನಡೆಸುವ, ಮಹಾರಾಣಿ ಟ್ರೋಫಿ ಆಯ್ಕೆ ಪ್ರಕ್ರಿಯೆಯಲ್ಲಿ, ಧಾರವಾಡ ಕ್ರಿಕೆಟ್ ಅಕಾದೆಮಿಯ, ರೂಪಿ ದೊಡ್ಡಮನಿ ಅವರು, ಮೈಸೂರು ವಾರಿಯರ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ಕೆ.ಎಸ್.ಸಿ.ಎ. ಆಯೋಜಿಸಿದ್ದ, ಅಂತಾರಾಜ್ಯ ಕ್ರಿಕೆಟ್ ಪಂದ್ಯಾವಳಿಗೆ ರೂಪಿ, ಈ ಮೊದಲು ಆಯ್ಕೆಯಾಗಿದ್ದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

ಹರ್ಷ.